# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ</u>

**CC No: 262/2020**

CW : 6 PW: 2

| | | |
|---|---|---|
| ಹೆಸರು | : | ಸುಭಾಷ |
| ತಂದೆಯ ಹೆಸರು | : | ಪುಂಡಲಿಕ ನಾಯಕ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಎ. ಎಸ್. ಐ |
| ಸ್ಥಳ | : | ಚಿತ್ತಾಪೂರ |

**(ದಿನಾಂಕ: 05-04-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**
**<u>ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ</u>**

ನಾನು 2015 ನೇ ಸಾಲಿನಿಂದ 2021 ಸಾಲಿನವರೆಗೆ ಶಹಾಬಾದ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 05-09-2019 ರಂದು 10-00 ಗಂಟೆಗೆ ನಾನು ಮತ್ತು ಚಾಸಾ-7 ರಿಂದ 9 ಠಾಣೆಯಲ್ಲಿ ಇದ್ದಾಗ ಚಾಸಾ-5 ರವರು ನಮಗೆ ತಿಳಿಸಿದ್ದೆನೆಂದರೆ ಶಹಾಬಾದನ ಲಕ್ಷ್ಮೀ ಗಂಜನಲ್ಲಿ ಪಡಿತರ ಆಹಾರ ಧಾನ್ಯ ಅಕ್ರಮವಾಗಿ ಶೇಖರಿಸಿಟ್ಟಿರುತ್ತಾರೆ ಅಂತಾ ಜಂಟಿ ನಿರ್ದೇಶಕರಾದ ಶ್ರೀಧರ ಚಾಸಾ-4 ರವರಿಗೆ ಬಾತ್ಮಿ ಬಂದಿದ್ದು ಎಲ್ಲರೂ ದಾಳಿ ಮಾಡಲು ಹೇಳಿ ಚಾಸಾ-2 ಮತ್ತು 3 ರವನ್ನು ಬರಮಾಡಿಕೊಂಡು ಒಂದು ಖಾಸಗಿ ವಾಹನದಲ್ಲಿ ಕುಳಿತು 11-30 ಕ್ಕೆ ಹೊರಟು 12-00 ಕ್ಕೆ ಲಕ್ಷ್ಮೀ ಗಂಜ ಏರಿಯಾದಲ್ಲಿರುವ ಮಂಜೂರ ಅಹಮದ್ ಬಾದಲ್ ಇವರ ಮನೆಗೆ ಚಾಸಾ-4 ರವರೊಂದಿಗೆ ದಾಳಿ ಮಾಡಿದಾಗ ನೆಲಮಹಡಿಯ ಒಂದು ಕೋಣೆಯಲ್ಲಿ ಹಾಗೂ ಒಂದನೇಯ ಮಹಡಿಯ ಕೋಣೆಯನ್ನು ಪರಿಶೀಲಿಸಲಾಗಿ ಪ್ಲಾಸ್ಟಿಕ ಚೀಲಗಳಲ್ಲಿ, ಗೋಣಿ ಚೀಲಗಳಲ್ಲಿ ಅಕ್ಕಿ ತುಂಬಿದ್ದು, ಗೋಣಿ ಚೀಲಗಳಲ್ಲಿ ತೊಗರಿ ಬೇಳೆ ಹಾಗೂ ಗೋಧಿ ತುಂಬಿದ ಚೀಲಗಳು ಕಂಡುಬಂದಿರುತ್ತವೆ. ಸದರಿ ಪಡಿತರ ಆಹಾರ ಧಾನ್ಯಗಳು ಚಾಸಾ-4 ರಮವರು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡು ನೋಡಲಾಗಿ 1) 71 ಕ್ವಿಂಟಲ್ ಅಕ್ಕಿ, 2) 2 ಕ್ವಿಂಟಲ್ 58 ಕೆ. ಜಿ ಗೋಧಿ, 3) 1 ಕ್ವಿಂಟಲ್ 26 ಕೆ. ಜಿ ತೊಗರಿ ಬೇಳೆ ಶೇಖರಿಸಿಟ್ಟಿದ್ದನ್ನು 12-00 ರಿಂದ 03-30 ರವರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಜಪ್ತಿಪಡಿಸಿಕೊಂಡಿರುತ್ತೇವೆ. ಸದರಿ ಆಹಾರ ಧಾನ್ಯಗಳು ಹಾಳಾಗುವ ಸಂಭವ ಇರುವ ಕಾರಣ ಶಹಾಬಾದನ ಕೆ. ಎಫ. ಸಿ. ಎಸ್. ಸಿ ಸಗಟು ಗೋದಾಮಿನಲ್ಲಿ ಜಮಾ ಮಾಡಿರುತ್ತೇವೆ. ನಂತರ ನಾವೆಲ್ಲರೂ ಠಾಣೆಗೆ ಬಂದು ಪಿರ್ಯಾದಿ ಸಲ್ಲಿಸಿದ್ದು ಇರುತ್ತದೆ. ನಾನು ಈ ಕುರಿತು ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುನ್ನಾ ಸ್ಥಳದ 2 ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು

**CC No: 262/2020**
CW : 6 PW: 2

ಈಗಾಗಲೇ ಮು. ಮಾ-1 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಸಿ.ಎಸ್.ಪಿ. ವಕೀಲರಿಂದ :</u>**

ಬಾತ್ಮಿ ಬಂದಾಗ ನಾವು ಠಾಣೆಯಲ್ಲಿ ಇದ್ದೇವು. ಗುನ್ನಾ ಸ್ಥಳಕ್ಕೆ ಚಾಸಾ-4 ಮತ್ತು 5 ರವರ ವಾಹನಗಳಲ್ಲಿಹೋಗಿರುತ್ತೇವೆ. ನನ್ನ ಹೇಳಿಕೆಯಲ್ಲಿ ವಾಹನದ ನಂಬರನ್ನು ಹೇಳಿ ಬರೆಸಿರುವುದಿಲ್ಲ. ನಮ್ಮ ಠಾಣೆಯಿಂದ ಗುನ್ನಾ ಸ್ಥಳ ಅಂದಾಜು 1 ವರೆ ಕಿ. ಮೀ ಅಂತರ ಇರುತ್ತದೆ. ಚಾಸಾ-4 ರವರು ನನ್ನ ಹಾಗೂ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-4 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮುದ್ದೆ ಮಾಲು ಹಾಗೂ ಆರೋಪಿತನಿಗೆ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಆರೋಪಿತನನ್ನು ನೋಡಿರುವುದಾಗಿ ಯಾವುದೇ ನಮೂದು ಇರುವುದಿಲ್ಲ ಅಂದರೆ ಸರಿ. ಮು. ಮಾ-1 ನ್ನು ನೋಡಿ ಗುರುತಿಸುತ್ತಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೆ. ಸರಿ ಇದೆ.**
**-Sd-**
**ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಶಹಬಾದ.**